









(6ನೇ ಪುಟದಿಂದ)

'ಗೊಂಬೆ ತೊಟ್ಟಿ' ಅರಮನೆಯ ಬಹುಮುಖ್ಯ ಆಕರ್ಷಣೆ. 84 ಕೆ.ಜಿ. ಚಿನ್ನದ ಅಂಬಾರಿ ಹೊತ್ತ ಆನೆಯು ಗೊಂಬೆಗಳ ಸಂಗ್ರಹದಲ್ಲಿ ಎದ್ದುಕಾಣುತ್ತದೆ. ಅರಮನೆಯ ಒಳಗೆ ಹೈದರಾಲಿ, ಟಿಪ್ಪು ಮತ್ತು ಒಡೆಯರು ಬಳಸಿದ ಹಲವು ಶಸ್ತ್ರಾಸ್ತ್ರಗಳಿವೆ. ಈ ಸಲವಂತೂ ಖಾಸಗಿ ದಸರಾದಲ್ಲಿ ಪಟ್ಟದ ಕತ್ತಿಯೇ ಸಿಂಹಾಸನದಲ್ಲಿ ಕುಳಿತಿರುವುದು ವಿಶೇಷ.

ಅರಮನೆಯ ಮೇಲಿನ ಗುಮ್ಮಟಗಳು ಇಸ್ಲಾಮಿಕ್, ಪರ್ಷಿಯನ್ ಶೈಲಿಯ ಸೊಬಗಿಗೆ ಕನ್ನಡಿ ಹಿಡಿದರೆ, ಛತ್ರಿಗಳು ರಜಪೂತ ಶೈಲಿಯಲ್ಲಿ ಮೂಡಿವೆ. ಗಜಲಕ್ಷ್ಮಿಯ ಒಂದು ಮೂರ್ತಿಯೂ ಅರಮನೆಯಲ್ಲಿದ್ದು, ಸಮೃದ್ಧಿಯ ಸಂಕೇತವಾಗಿ ಅದು ಕಾಣುತ್ತದೆ. ಅರಮನೆಯ ಮೇಲ್ಭಾಗದ ಫೋಟೊಗಳನ್ನು ನೋಡಿ, ಎಲ್ಲೋ ನೋಡಿದ್ದೇವಲ್ಲ.. ಎಂದುಕೊಂಡರೆ ಅದು ನಿಮ್ಮ ತಪ್ಪಲ್ಲ; 'ಡ್ರಾಮಾ' ಕನ್ನಡ ಸಿನಿಮಾದಲ್ಲಿ ಇಲ್ಲಿಂದಲೇ ಕೆಲವು ದೃಶ್ಯಗಳನ್ನು ಶೂಟ್ ಮಾಡಲಾಗಿತ್ತು.